ವಿನಹ ಅದು ಕೂಡ ಬೆಳಿಗ್ಗೆ ಮತ್ತು ಸಾಯಂಕಾಲ ಮಾತ್ರ ಅವಕಾಶ ಇದೆ. ಆದಕಾರಣ ದಯವಿಟ್ಟು ನೀವು ಅಲ್ಲಿಗೆ ಹೋಗಬೇಡಿ ಎಂದು ಅಪಪ್ರಚಾರ ಮಾಡುತ್ತಿದ್ದಾರೆ. ಆದಕಾರಣ ನಾನು ಈ ಸಂದರ್ಭದಲ್ಲಿ ಪ್ರವಾಸಿಗರಿಗೆ ಅಲ್ಲಿ ಅನುಕೂಲವನ್ನು ದಯವಿಟ್ಟು ಮಾಡಬೇಕೆಂದು ಸರ್ಕಾರವನ್ನು ಮತ್ತೊಮ್ಮೆ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್ : ಅಲ್ಲಿ ಪ್ರವಾಸಿಗರಿಗೆ ಅನುಕೂಲವಾಗಲು ಏನು ಮಾಡಬೇಕೋ ಅದನ್ನು ಮಾಡುತ್ತಿದ್ದೇವೆ. ಅದಕ್ಕೆ ಜಂಗಲ್ ಲಾಡ್ಜಸ್ ಅಂಡ್ ರಿಸಾರ್ಟ್ಸ್ ಎಂದು ಬೇರೆ ಕಂಪನಿ ಮಾಡಿದ್ದೇವೆ. ಅದು ಪ್ರವಾಸೋದ್ಯಮಕ್ಕೆ ಹೊರತಾಗಿದೆ. ಈಗ ಅದನ್ನೆಲ್ಲಾ ಸೇರಿಸುತ್ತಿದ್ದೇವೆ. ಈಗ ಕೆಲವು ಪ್ರೈವೇಟ್ ಇನ್ ವೆಸ್ಟಮೆಂಟ್‌ನವರೂ ಬಂದಿದ್ದಾರೆ. ನಾಗರಹೊಳೆ ಮತ್ತು ಬಂಡಿಪುರ ಈ ಪ್ರದೇಶದಲ್ಲಿ ಹೋಗಬೇಡಿ ಹೋಗಬೇಡಿ ಎಂದು ಯಾರು ಹೇಳುತ್ತಾರೋ ಅವರಿಗೆ ನಾವು ಪಾಠ ಕಲಿಸಬೇಕಾಗುತ್ತದೆ. ಆ ಸ್ಥಳ ಹೋಗುವ ಹಾಗಿದೆ ಎಂದು ನಾವು ತೋರಿಸಿದರೆ ಹೋಗಬೇಡಿ ಎಂದು ಯಾರಾದರೂ ಹೇಳಿದರೆ ಯಾರೂ ಕೇಳುವುದಿಲ್ಲ ಹಾಗೂ ಈ ಪ್ರಚಾರ ಆಗುವುದಿಲ್ಲ.

ಕೋಲಾರ ಬೆಟ್ಟವನ್ನು ಪ್ರೇಕ್ಷಣೀಯ ಸ್ಥಳವನ್ನಾಗಿ ಮಾಡುವುದು.

130 - ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೋಲಾರ ಚಿನ್ನ (ಶತಶೃಂಗ ಪರ್ವತ) ಒಂದು ಪ್ರೇಕ್ಷಣೀಯ ಸ್ಥಳ ಎಂಬುದು ನಿಜವೇ?*

ಆ) *ಹಾಗಿದ್ದಲ್ಲಿ ಇದನ್ನು ಪ್ರೇಕ್ಷಣೀಯ ಸ್ಥಳವನ್ನಾಗಿ ಅಭಿವೃದ್ಧಿ ಪಡಿಸಲು ಸರ್ಕಾರದವರು ಹಾಕಿಕೊಂಡಿರುವ ಕ್ರಮಗಳೇನು?*

ಶ್ರೀ ಜೆ.ಹೆಚ್. ಪಟೇಲ್ (ಉಪಮುಖ್ಯ ಮಂತ್ರಿಗಳು) :

ಅ) ಹೌದು.

ಆ) ಈ ಸ್ಥಳವನ್ನು ಅಭಿವೃದ್ಧ ಪಡಿಸುವ ಬಗ್ಗೆ ಯಾವ ಪ್ರಸ್ತಾಪ ಇರುವುದಿಲ್ಲ. ರಾಜ್ಯ ಪ್ರವಾಸೋದ್ಯಮ ಕಾರ್ಯ ನೀತಿಯಲ್ಲಿ ಈ ಸ್ಥಳವನ್ನು ಗುಂಪಿನಲ್ಲಿ ಸೇರಿಸಲಾಗಿದೆ.

ಅಧ್ಯಕ್ಷರು : ಶ್ರೀನಿವಾಸ ಗೌಡರ ಹೆಸರಿನಲ್ಲಿರುವ ಪ್ರಶ್ನೆಯನ್ನು ನಾನೇ ಕೇಳುತ್ತೇನೆ. ಏಕೆಂದರೆ. ಅವರು ಬೆಳಿಗ್ಗೆ ನನಗೆ ದೂರವಾಣಿ ಮುಖಾಂತರ ನಾನು ಬರುವುದು ಸ್ವಲ್ಪ ತಡವಾಗುತ್ತದೆ ಎಂದಿದ್ದರು. ದಯವಿಟ್ಟು ಇದಕ್ಕೆ ಉತ್ತರಿಸಿ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ, ಕೋಲಾರ ಬೆಟ್ಟ (ಶತಶೃಂಗ ಪರ್ವತ) ಒಂದು ಪ್ರೇಕ್ಷಣೀಯ ಸ್ಥಳವೇ ಎಂದು ಕೇಳಿದ್ದಾರೆ, ಹೌದು, ಆ ಸ್ಥಳವನ್ನು ಅಭಿವೃದ್ಧಿ ಪಡಿಸುವ ಬಗ್ಗೆ ಇಲ್ಲಿಯವರೆಗೆ ಯಾವುದೇ ಪ್ರಸ್ತಾಪವಿಲ್ಲ, ನಾನು ಇಲ್ಲದೇ ಇದದ್ದನ್ನು ಇದೆ ಎಂದು ಹೇಳುವುದಿಲ್ಲ. ಆದರೆ ನಮ್ಮ ರಾಜ್ಯದಲ್ಲಿ ಕೆಲವು ಅತ್ಯಂತ ಅಪೂರ್ವವಾದ ಪ್ರೇಕ್ಷಣೀಯ ಸ್ಥಳಗಳು ಇವೆ. ಅಲ್ಲಿಗೆ

ಹೋಗತಕ್ಕಂಥದ್ದಕ್ಕೆ ಮಾರ್ಗಗಳು ಇಲ್ಲ, ಸರಿಯಾಗಿ ಸರಿಯಾದ ದಾರಿ ಇಲ್ಲದೇ ಇರುವುದರಿಂದ, ಯಾರೋ ಪ್ರವಾಸಿಗರು ಹಿಂದೆ ಅಲ್ಲಿಗೆ ಹೋಗಿ ನೋಡಿಕೊಂಡು ಬಂದು ಇಂಥಿಂಥ ಪ್ರದೇಶದಲ್ಲಿ ಇಂಥಿಂಥದ್ದು ಇದೆ ಎಂದು ಹೇಳಿದ್ದಾರೆ. ಆದ್ದರಿಂದ ನಮ್ಮ ರಾಜ್ಯದಲ್ಲಿರತಕ್ಕಂಥ ಪ್ರಪಂಚದಲ್ಲೇ ಅತ್ಯಂತ ಪ್ರೇಕ್ಷಣೀಯವಾಗಿರತಕ್ಕಂಥ ಸ್ಥಳಗಳನ್ನು ಪ್ರವಾಸಿಗರನ್ನು ಕರೆಸುವುದಕ್ಕೆ ಇನ್ ಫ್ರಾಸ್ಟ್ರಕ್ಚರ್ ಎಂದು ಏನು ಹೇಳುತ್ತೇವೆ, ಅಂದರೆ ರಸ್ತೆ ಸೌಲಭ್ಯ, ಬಸ್‌ಗಳ ಸೌಲಭ್ಯ, ಅಲ್ಲಿ ಇಳಿಮಕೊಳ್ಳುವುದಕ್ಕೆ ಬಂಗಲೆ ಅಂದರೆ ಪ್ರವಾಸಿ ಬಂಗಲೆ, ಇವುಗಳನ್ನು ಇನ್ನು 2 ವರ್ಷದಲ್ಲಿ ಮಾಡುತ್ತೇವೆ. ವಿಕೆಂದರೆ ನಾನು ತಕ್ಷಣ ಮಾಡುತ್ತೇವೆಂದು ಹೇಳುವುದಿಲ್ಲ. ಇನ್ನು ಎರಡು ವರ್ಷದಲ್ಲಿ ಇವನ್ನೆಲ್ಲ ಸುಧಾರಣೆ ಮಾಡುತ್ತೇವೆ.

ಅಧ್ಯಕ್ಷರು : ಈ ಪ್ರಶ್ನೆಗ ಸಂಬಂಧಿಸಿದಂತೆ ಒಂದು ಉಪ ಪ್ರಶ್ನೆಯಿದೆ. ನನಗೆ ನಜೀರ್ ಯಾವಾಗಲೂ. ಹೇಳುತ್ತಿದ್ದರು, ಗೋಪಾಲಸ್ವಾಮಿ ಬೆಟ್ಟ ಇದೆ, ಅಲ್ಲೂ ಕೂಡ ಅಭಿವೃದ್ಧಿ ಕೆಲಸ ಮಾಡಬೇಕೆಂದು. ಆದ್ದರಿಂದ ನೀರು ಈ ಎರಡೂ ಬೆಟ್ಟಗಳ ಬಗ್ಗೆ ತಾವು ಆಸಕ್ತಿ ವಹಿಸಿ ಕೆಲಸ ಮಾಡಿಸಬೇಕು.

ಶ್ರೀ ಜೆ.ಹೆಚ್. ಪಟೇಲ್ : ಆಗಬಹುದು ಮಾನ್ಯ ಅಧ್ಯಕ್ಷರೇ, ನನಗೆ ನಜೀರ್ ಸಾಬ್ ರವರ ನೆನಪು ಬರುತ್ತದೆ, ಅವರು ಬಹಳ ಸಾರಿ ಇದರ ಬಗ್ಗೆ ಹೇಳುತ್ತಿದ್ದರು, ಅದನ್ನು ನಮ್ಮ ಪಟ್ಟಿಯಲ್ಲಿ ಸೇರಿಸುತ್ತೇವೆ.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೇ, ಕಲ್ಲೂರಿನಲ್ಲಿ ಕೊಡಚಾದ್ರಿ ಪರ್ವತ ಇದೆ, ಇದರ ಜೊತೆಗೆ ನರಹರಿ ಪರ್ವತವನ್ನೂ ಕೂಡ ಸೇರಿಸಿದರೆ ಅದು ಕೂಡ ತುಂಬಾ ಪ್ರೇಕ್ಷಣೀಯ ಸ್ಥಳವಾಗುತ್ತದೆ ಎರಡು ನನ್ನ ಅನಿಸಿಕೆ.

ಶ್ರೀ ಸಿ.ಹೆಚ್. ವಿಜಯಶಂಕರ್ : ಮಾನ್ಯ ಅಧ್ಯಕ್ಷರೇ, ಕೊಡಚಾದ್ರಿ ತುಂಬಾ ಒಳ್ಳೆಯ ಸ್ಥಳ, ಈ ವಿಷಯ ಮಾನ್ಯ ಪಟೇಲ್‌ರಿಗೂ ಗೊತ್ತಿದೆ. ಶಿವಮೊಗ್ಗಾ ಜಿಲ್ಲಾ ಪರಿಷತ್ ನಿಂದ ಅದನ್ನು ಸ್ವಲ್ಪ ಅಭಿವೃದ್ಧಿ ಪಡಿಸುವಂಥ ಪ್ರಯತ್ನ ನಡೆದಿದೆ. ಅಲ್ಲಿಗೆ ಸಾವಿರಾರು ಜನರು ಬಂದು ಹೋಗುತ್ತಾರೆ. ದಯಮಾಡಿ ಅದನ್ನು ಅಭಿವೃದ್ಧಿ ಪಡಿಸಬೇಕು.

ಶ್ರೀ ಜೆ.ಹೆಚ್. ಪಟೇಲ್ : ನಾನು ನೋಡಿದ್ದೇನೆ, ಅದು ಬಹಳ ಉತ್ತಮವಾದ, ಸುಂದರವಾದ ಸ್ಥಳವೂ ಹೌದು. ಆದರೆ ಹೋಗತಕ್ಕಂಥ ಮಾರ್ಗವೇನಿದೆ ಅದು ತುಂಬಾ ಕೆಟ್ಟದಾದ ದಾರಿ ಇದೆ, ಅಲ್ಲಿಗೆ ಜೀಪ್ ಕೂಡ ಹೋಗುವುದಕ್ಕೆ ಕಷ್ಟ ಅಲ್ಲಿ ಒಂದು ಸಣ್ಣ ಗೆಸ್ಟ ಹೌಸ್ ಕಟ್ಟಿದ್ದರು, ಅದರ ಸುಧಾರಣೆ ಅವಶ್ಯಕ ಎನ್ನುವುದನ್ನು ನಾನು ಒಪ್ಪುತ್ತೇನೆ.

ಗಂತಸಿ ಕ್ಷೇತ್ರದ ಕುಡಿಯುವ ನೀರಿನ ಯೋಜನೆಗಳ ವಿದ್ಯುದ್ದೀಕರಣ.

132 - ಶ್ರೀ.ಬಿ. ಶಿವರಾಮು (ಗಂತಸಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?